## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಲಿಂಗಸೂಗೂರು

**ಉಪಸ್ಥಿತರು:–**

**ಶ್ರೀ ಸಂದೀಪ ಪಾಟೀಲ,** ಬಿ.ಎ.ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು, ಲಿಂಗಸುಗೂರು.

**ಕ್ರಿಮಿನಲ್ ಪ್ರಕರಣ ಸಂಖ್ಯೆ: 912/2018**

**ದಿನಾಂಕ: 20ನೇ ನವೆಂಬರ್ 2019**

ಫಿರ್ಯಾದಿದಾರ : ಕರ್ನಾಟಕ ರಾಜ್ಯ ಇವರ ಪರವಾಗಿ
ಲಿಂಗಸುಗೂರು ಪೊಲೀಸ್ ಠಾಣೆ.

(ಸಹಾಯಕ ಸರ್ಕಾರಿ ಅಭಿಯೋಜಕರಿಂದ ಪ್ರತಿನಿಧಿಸಿದೆ.)

-:ವಿರುದ್ಧ:-

**ಆರೋಪಿಗಳು :–**

1. ಕುಪ್ಪಣ್ಣ ತಂದೆ ಹುಲಗಪ್ಪ, ಉ: ಮ್ಯಾಸನ್
ಸಾ: ಕಸಬಾ ಲಿಂಗಸುಗೂರು, ವಯಾ: 23
ತಾ: ಲಿಂಗಸುಗೂರು, ಜಿ: ರಾಯಚೂರು.

2. ಬಸಮ್ಮ ಗಂಡ ಹುಲಗಪ್ಪ,
ಸಾ: ಕಸಬಾ ಲಿಂಗಸುಗೂರು, ವಯಾ: 46
ತಾ: ಲಿಂಗಸುಗೂರು, ಜಿ: ರಾಯಚೂರು.

3. ಅಮರೇಶ ತಂದೆ ಹುಲಗಪ್ಪ,
ಸಾ: ಕಸಬಾ ಲಿಂಗಸುಗೂರು, ವಯಾ: 25
ತಾ: ಲಿಂಗಸುಗೂರು, ಜಿ: ರಾಯಚೂರು.

**(ಶ್ರಿ ಎಸ್.ಹೆಚ್.ಎಸ್. ವಕೀಲರು ಪ್ರತಿನಿಧಿಸಿದ್ದಾರೆ)**

| | | |
|---|---|---|
| 1. | ಘಟನೆ ನಡೆದ ದಿನಾಂಕ | 15–09–2018 |
| 2. | ಪ್ರಕರಣ ದಾಖಲಾದ ದಿನಾಂಕ | 15–09–2018 |
| 3. | ಕಲಂಗಳು | ಭಾ.ದಂ.ಸಂ.ಕಲಂ 341, 323, 324, 354, 504, 109, 506 ಸಹಿತ 34ರ ಐಪಿಸಿ |
| 4. | ಸಾಕ್ಷ್ಯಗಳ ವಿಚಾರಣೆ ಪ್ರಾರಂಭವಾದ ದಿನಾಂಕ | 05–11–2019 |
| 5. | ಸಾಕ್ಷ್ಯಗಳ ಮುಕ್ತಾಯವಾದ ದಿನಾಂಕ | 05–11–2019 |
| 6. | ತೀರ್ಪಿನ ಆದೇಶ | ಅಂತಿಮ ಆದೇಶದಂತೆ |

**:: ತೀರ್ಪು ::**

ಲಿಂಗಸುಗೂರು ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂಃ 341, 323, 324, 354, 504, 109, 506 ಸಹಿತ 34ರ ಐಪಿಸಿ ರೀತ್ಯ ಅಪರಾಧ ಮಾಡಿದ್ದಾರೆಂದು ಆಪಾದಿಸಿ ಈ ಅಂತಿಮ ವರದಿ ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ:–** ಲಿಂಗಸುಗೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕಸಬಾ–ಲಿಂಗಸುಗೂರು ಬಸ್ ನಿಲ್ದಾಣದ ಹತ್ತಿರ ದಿನಾಂಕ 15–09–2018 ರಂದು ಬೆಳಗ್ಗೆ 07–30 ಗಂಟೆಗೆ ಸದರಿ ಬಸ್ ನಿಲ್ದಾಣದ ಹತ್ತಿರ ಚಾ.ಸಾ–1ರವರು ನಡೆದುಕೊಂಡು ಕಾಲೇಜಿಗೆ ಹೊರಟಾಗ ಆರೋಪಿತರು ಆಕೆಯನ್ನು ತಡೆದು ನಿಲ್ಲಿಸಿ, ಲೇ ಬೋಸುಡಿ ನನ್ನ ಮೇಲೆ ಪೊಲೀಸರ ಮುಂದೆ ಕಂಪ್ಲೇಂಟ್ ಕೊಡುವಷ್ಟು ಸೊಕ್ಕೇನು ನಿನಗೆ ಎಂದು ಬೈಯುತ್ತಿದ್ದಾಗ 2ನೇ ಆರೋಫಿಯು ಈ ಸೂಳೆದು ತಿಂಡಿ ಬಹಳ ಆಗಿದೆ ಸಿಕ್ಕಾಳ ಬಿಡಬ್ಯಾಡ ಇವಳನ್ನು ತಿಂಡಿ ಮುರಿಬೆಕು ನೋಡು ಎಂದು 1ನೇ ಆರೋಪಿಗೆ ಪ್ರಚೋದನೆ ನೀಡಿದ್ದರಿಂದ 1ನೇ ಆರೋಪಿಯು ಆಕೆಯ ಕೈ ಹಿಡಿದು ಎಳೆದಾಡಿ, ಕಪಾಳಕ್ಕೆ ಮತ್ತು ತಲೆಗೆ ಹೊಡೆದು ಮುಖಕ್ಕೆ ಕಟ್ಟಿಕೊಂಡ ಸ್ಕಾರ್ಪ ಕಿತ್ತಿ ಬಿಸಾಕಿ ಹಿಡಿದು ನೂಕಿದ್ದರಿಂದ ಕೆಳಗೆ ಬಿದ್ದು ಕಾಲಿಗೆ ಪೆಟ್ಟಾಗಿ

ನಂತರ 3ನೇ ಆರೋಪಿಯು ಬಂದು ಇನ್ನೊಂದು ಸಲ ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಈ ಕುರಿತು ಚಾ.ಸಾ–1ರವರು ನೀಡಿದ ಗಣಕೀಕೃತ ದೂರನ್ನು ಪಡೆದು ತನಿಖಾಧಿಕಾರಿಗಳು ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆ ಪೂರ್ಣಗೊಂಡ ಮೇಲೆ ಆರೋಪಿಗಳ ವಿರುದ್ದ ದೋಷಾರೋಪಣೆ ರುಜುವಾತುವಾಗಿದೆ ಎಂದು ಹೇಳಿ ಈ ಒಂದು ಅಂತಿಮ ವರದಿಯನ್ನು ಕಲಂ 341, 323, 324, 354, 504, 109, 506 ಸಹಿತ 34ರ ಐಪಿಸಿ ಅಪರಾಧಗಳಿಗೆ ಸಂಬಂಧಿಸಿ ಸಲ್ಲಿಸಿರುತ್ತಾರೆ.

3. ಸದರಿ ಅಂತಿಮ ವರದಿಯ ಆಧಾರದ ಮೇಲೆ ಈ ನ್ಯಾಯಾಲಯವು ಆರೋಪಿಗಳ ವಿರುದ್ದ ಮೇಲ್ಕಂಡ ಆರೋಪಗಳಿಗೆ ಸಂಬಂಧಿಸಿ ಸಂಜ್ಞೆಯತೆಯನ್ನು ತೆಗೆದುಕೊಳ್ಳಲಾಗಿರುತ್ತದೆ ನಂತರ ನ್ಯಾಯಾಲಯವು ನೀಡಿದ ಸಮನ್ಸ್ ಮೇರೆಗೆ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಜಾಮೀನನ್ನು ಪಡೆದುಕೊಂಡಿರುತ್ತಾರೆ ನಂತರ ದಂ.ಪ್ರ.ಸಂ.ಯ ಕಲಂ.207 ರಂತೆ ಅಭಿಯೋಜನೆಯ ಪ್ರಕರಣದ ಎಲ್ಲಾ ದಾಖಲೆಗಳ ನಕಲುಗಳನ್ನು ಆರೋಪಿತರಿಗೆ ನೀಡಲಾಯಿತು.

4. ನಂತರ ಸದರಿ ಆರೋಪಿಗಳ ವಿರುದ್ದ ಮೇಲ್ಕಂಡ ಕಲಂಗಳಿಗೆ ಅನ್ವಯಿಸಿ ದೋಷಾರೋಪಣೆಯನ್ನು ರಚಿಸಿ ನಂತರ ಅದರ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ತಾವು ಯಾವುದೆ ತಪ್ಪು ಮಾಡಿಲ್ಲವೆಂದು ಪೋಲೀಸರು ತಮ್ಮ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಎಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆಂದು ತಿಳಿಸಿ ಸಾಕ್ಷಿಯು ವಿಚಾರಣೆ ಮಾಡಲು ಕೋರಿಕೊಂಡಿರುತ್ತಾರೆ.

5. ಅದರಂತೆ ಪ್ರಕರಣವನ್ನು ಅಭಿಯೋಜನೆಯ ಸಾಕ್ಷಿಯ ವಿಚಾರಣೆಯಿಂದ ಅಭಿಯೋಜನೆಯವರು ತಮ್ಮ ಪರವಾಗಿ ಎರಡು ಜನ ಸಾಕ್ಷಿದಾರನನ್ನು ವಿಚಾರಣೆ ಮಾಡಿಕೊಂಡು ಅವರ ಮೂಲಕ ಮೂರು ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಪ್ರಕರಣದ ಫಿರ್ಯಾದಿಯೆ ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನಾ

ಕೇಸನ್ನು ಬೆಂಬಲಿಸಿ ಸಾಕ್ಷ್ಯ ನುಡಿಯದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಮಾನ್ಯ ಸ.ಸ.ಅ. ರವರ ಕೋರಿಕೆಯನ್ನು ತಿರಸ್ಕರಿಸಿ ಅಭಿಯೋಜನೆಯ ಪರ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು. ಆರೋಪಿಗಳ ವಿರುದ್ದ ಯಾವುದೇ ಆಪಾದಿಸುವಂತಹ ಸಾಕ್ಷ್ಯ ಇರದ ಕಾರಣ ದಂ.ಪ್ರ.ಸಂ. ಕಲಂ. 313ರ ಹೇಳಿಕೆಗಳನ್ನು ದಾಖಲಿಸುವ ಹಂತವನ್ನು ಕೈಬಿಡಲಾಯಿತು. ಕಾರಣ ಉಭಯತ್ರರ ವಾದ-ವಿವಾದಗಳನ್ನು ಕೇಳಿ, ಕಡತವನ್ನು ಪರಿಶೀಲಿಸಿದಾಗ ಈ ಕೆಳಗಿನ ಪ್ರಶ್ನೆಗಳು ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುತ್ತವೆ.

1. ಲಿಂಗಸುಗೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕಸಬಾ-ಲಿಂಗಸುಗೂರು ಬಸ್ ನಿಲ್ದಾಣದ ಹತ್ತಿರ ದಿನಾಂಕ 15-09-2018 ರಂದು ಬೆಳಗ್ಗೆ 07-30 ಗಂಟೆಗೆ ಆರೋಪಿಗಳು ಪಿರ್ಯಾದಿ ಭಾಗ್ಯಶ್ರೀರವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿದ್ದು ಆ ಮೂಲಕ ಭಾ,ದಂ.ಸಂ.ಕಲಂ 341 ಸಹಿತ 34ರ ಅಡಿಯಲ್ಲಿ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

2. ಮೇಲೆ ತಿಳಿಸಿದ ದಿನಾಂಕ, ಸ್ಥಳ, ವೇಳೆ ಆರೋಪಿಗಳು ಚಾ.ಸಾ-1ರವರಿಗೆ ಲೇ ಬೋಸುಡಿ ನನ್ನ ಮೇಲೆ ಪೋಲೀಸರ ಮುಂದೆ ಕಂಪ್ಲೇಟ್ ಕೊಡುವಷ್ಟು ಸೊಕ್ಕೇನು ನಿನಗೆ ಎಂದು ಅವಾಚ್ಯವಾದ ಶಬ್ದಗಳಿಂದ ಬೈದಿದ್ದು ಮತ್ತು 2ನೇ ಆರೋಪಿಯು ಚಾ.ಸಾ-1ರವರಿಗೆ ಈ ಸೂಳೆದು ತಿಂಡಿ ಬಹಳ ಆಗಿದೆ ಸಿಕ್ಕಾಳ ಬಿಡಬ್ಯಾಡ ಇವಳನ್ನು ತಿಂಡಿ ಮುರಿಬೇಕು ನೋಡು ಎಂದು ಅವಾಚ್ಯವಾಗಿ ಬೈದಿದ್ದು ಆ ಮೂಲಕ ಭಾ,ದಂ.ಸಂ.ಕಲಂ 504 ಸಹಿತ 34ರ ಅಡಿಯಲ್ಲಿ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

3. ಮೇಲೆ ತಿಳಿಸಿದ ದಿನಾಂಕ, ಸ್ಥಳ, ವೇಳೆ ಹಾಗೂ ವಿಷಯವಾಗಿ, ಆರೋಪಿಗಳು ಚಾ.ಸಾ–1ರವರಿಗೆ ಕೈಗಳಿಂದ ಕಪಾಳಕ್ಕೆ ಮತ್ತು ತಲೆಗೆ ಹೊಡೆದಿದ್ದು ಆ ಮೂಲಕ ಭಾ,ದಂ.ಸಂ.ಕಲಂ 323 ಸಹಿತ 34 ರ ಅಡಿಯಲ್ಲಿ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

4. ಮೇಲೆ ತಿಳಿಸಿದ ದಿನಾಂಕ, ಸ್ಥಳ, ವೇಳೆ ಹಾಗೂ ವಿಷಯವಾಗಿ, ಆರೋಪಿಗಳು ಚಾ.ಸಾ–1ರವರಿಗೆ ಕೈ ಹಿಡಿದು ಎಳೆದಾಡಿ, ಮುಖಕ್ಕೆ ಕಟ್ಟಿಕೊಂಡ ಸ್ಕಾರ್ಪ್ ಕಿತ್ತಿ ಬಿಸಾಕಿ ಹಿಡಿದು ಬಿಡುವುದಿಲ್ಲವೆಂದು ಮಾನಭಂಗ ಉಂಟುಮಾಡಿದ್ದು ಆ ಮೂಲಕ ಭಾ,ದಂ.ಸಂ.ಕಲಂ 354 ಸಹಿತ 34 ರ ಅಡಿಯಲ್ಲಿ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

5. ಮೇಲೆ ತಿಳಿಸಿದ ದಿನಾಂಕ, ಸ್ಥಳ, ವೇಳೆ ಹಾಗೂ ವಿಷಯವಾಗಿ, 2ನೇ ಆರೋಪಿಯು 1ನೇ ಆರೋಪಿತನಿಗೆ ಚಾ.ಸಾ–1ರವರನ್ನು ಹೊಡೆಯಲು ಪ್ರಚೋದಿಸಿದ್ದು ಆ ಮೂಲಕ ಭಾ,ದಂ.ಸಂ.ಕಲಂ 109 ಸಹಿತ 34 ರ ಅಡಿಯಲ್ಲಿ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

6. ಮೇಲೆ ತಿಳಿಸಿದ ದಿನಾಂಕ, ಸ್ಥಳ, ವೇಳೆ ಹಾಗೂ ವಿಷಯವಾಗಿ, 3ನೇ ಆರೋಪಿತನು ಚಾ.ಸಾ–1ರವರಿಗೆ ಇನ್ನೊಂದು ಸಲ ನಮ್ಮ ತಂಟೆಗೆ ಬಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಜೀವದ ಬೆದರಿಕೆ ಹಾಕಿದ್ದು ಆ ಮೂಲಕ ಭಾ,ದಂ.ಸಂ.ಕಲಂ 506 ಸಹಿತ 34 ರ ಅಡಿಯಲ್ಲಿ ಅಪರಾದವನ್ನು ಈ ನ್ಯಾಯಾಲಯದ

ಸಂಜ್ಞೆಯಲ್ಲಿ ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವರೇ?

6. ಯಾವ ಆದೇಶ?

ಈ 1 ರಿಂದ 5ನೇ ಪ್ರಶ್ನೆಗಳನ್ನು ರುಜುವಾತು ಪಡಿಸಬೇಕಾದಲ್ಲಿ ಅಭಿಯೋಜನೆಯವರು ಸಾಕಷ್ಟು ನಂಬಲಾರ್ಹವಾದ ಮತ್ತು ಸಂಶಯಾತೀತವಾದ ಸಾಕ್ಷ್ಯವನ್ನು ಕೊಡಬೇಕಾಗುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿ ಹಾಗೂ ವಾದ–ವಿವಾದವನ್ನು ಕೇಳಿದ ನಂತರ ಮೇಲ್ಕಂಡ ಪ್ರಶ್ನೆಗಳನ್ನು ನಕಾರಾತ್ಮಕವಾಗಿ ಉತ್ತರಿಸಿ ಈ ಕೆಳಗಿನ ಕಾರಣಗಳನ್ನು ಕೊಡಬಯಸುತ್ತೇನೆ.

**–ಃಕಾರಣಗಳುಃ–**

**6. ಪ್ರಶ್ನೆ: 1 ರಿಂದ 5 :–** ಈ ಐದು ಪ್ರಶ್ನೆಗಳ ಘಟನೆಗಳು ಏಕ ಕಾಲದಲ್ಲಿ ನಡೆದಿದ್ದು ಸಂಗತಿಗಳನ್ನು ಪುನರುಚ್ಚರಿಸುವುದನ್ನು ತಪ್ಪಿಸಲು ಎಲ್ಲಾ ಪ್ರಶ್ನೆಗಳನ್ನು ಏಕ ಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಅಭಿಯೋಜನೆಯವರು ಪ್ರಕರಣವನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಒಟ್ಟು 07 ಜನ ಸಾಕ್ಷಿದಾರರನ್ನು ನಮೂದಿಸಿದ್ದು, ಅವರುಗಳಲ್ಲಿ ಪ್ರಕರಣದ ಚಾ.ಸಾ–1 ಮತ್ತು ಚಾ.ಸಾ–3ರವರನ್ನು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದ ಕಾರಣ ಉಳಿದ ಸಾಕ್ಷಿದಾರರ ಸಾಕ್ಷ್ಯಾವನ್ನು ಕೈಬಿಡಲಾಯಿತು. ಅಭಿಯೋಜನೆಯವರು ತಮ್ಮ ಪರವಾಗಿ ನಿಶಾನೆ ಪಿ ಃ1 ರಿಂದ 3ನ್ನು ಗುರುತಿಸಿರುತ್ತಾರೆ.

7. ಅಭಿಯೋಜನೆಯವರು ಪ್ರಕರಣದ ಚಾ.ಸಾ–1 ಭಾಗ್ಯಶ್ರೀರವರನ್ನು ಅ.ಸಾ–1 ಎಂದು ವಿಚಾರಣೆ ಮಾಡಿದ್ದು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ 1 ವರೆ ವರ್ಷದ ಹಿಂದೆ ಕಸಬಾಲಿಂಗಸುಗೂರಿನ ಬಸ್ ನಿಲ್ದಾಣದ ಹತ್ತಿರ ತಮ್ಮ ಮತ್ತು ಆರೋಪಿತರ

ನಡುವೆ ಬಾಯಿ ಮಾತಿನ ಜಗಳವಾಗಿರುವದಾಗಿ ಈ ವಿಚಾರವಾಗಿ ತಾನು ಪೊಲಿಸರ ಮುಂದೆ ಹೇಳಿಕೆಯ ದೂರನ್ನು ನೀಡಿರುವದಾಗಿ ಆದರೆ ಆರೋಪಿತರು ತಮ್ಮ ಮೇಲೆ ಯಾವುದೆ ಹಲ್ಲೆಯನ್ನು ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಪ್ರಾಣ ಬೆದರಿಕೆಯನ್ನು ಹಾಕಿರುವುದಿಲ್ಲ ಮತ್ತು ಮಾನಭಂಗವನ್ನು ಮಾಡಲು ಪ್ರಯತ್ನಿಸಿರುವುದಿಲ್ಲ ಮತ್ತು ತಾನು ಪೊಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ ಮತ್ತು ತನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲವೆಂದು ನುಡಿದಿರುತ್ತಾರೆ. ಸದರಿಯವರ ಸಾಕ್ಷಿಯನ್ನು ಗಮನಿಸಲಾಗಿ ಸದರಿಯವರು ಅಭಿಯೋಜನೆಯ ಕೇಸಿಗೆ ಸಂಪೂರ್ಣವಾಗಿ ವಿರುದ್ಧವಾಗಿ ನುಡಿದಿರುತ್ತಾರೆ. ಅಭಿಯೋಜಕರ ವಿನಂತಿಯ ಮೇರೆಗೆ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದ್ದು, ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆಗೆ ಅನುಕೂಲಕರವಾಗುವಂತಹ ಯಾವುದೇ ಅಂಶಗಳನ್ನು ಈ ಸಾಕ್ಷಿಯಿಂದ ಹೇಳಿಸಿಕೊಂಡಿರುವುದಿಲ್ಲ.

8. ಅಭಿಯೋಜನೆಯವರು ಪ್ರಕರಣದ ಸಾಕ್ಷಿ ಚಾ.ಸಾ–3 ರೇಣುಕಾರವರನ್ನು ಕ್ರಮವಾಗಿ ಅ.ಸಾ–2 ಎಂದು ವಿಚಾರಣೆ ಮಾಡಿದ್ದು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ ಪ್ರಕರಣದ ಬಗ್ಗೆ ತಮಗೆ ಏನು ಗೊತ್ತಿಲ್ಲ, ತಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ ಮತ್ತು ಬಿಡಿಸಲು ಪ್ರಯತ್ನಿಸಿರುವುದಿಲ್ಲ ಮತ್ತು ತಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ನುಡಿದಿರುತ್ತಾರೆ. ಸದರಿಯವರ ಸಾಕ್ಷಿಗಳನ್ನು ಗಮನಿಸಲಾಗಿ ಸದರಿಯವರು ಅಭಿಯೋಜನೆಯ ಕೇಸಿಗೆ ಸಂಪೂರ್ಣವಾಗಿ ವಿರುದ್ಧವಾಗಿ ನುಡಿದಿರುತ್ತಾರೆ. ಅಭಿಯೋಜಕರ ವಿನಂತಿಯ ಮೇರೆಗೆ ಸದರಿ ಸಾಕ್ಷಿಗಳನ್ನು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದ್ದು, ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆಗೆ

ಅನುಕೂಲಕರವಾಗುವಂತಹ ಯಾವುದೇ ಅಂಶಗಳನ್ನು ಈ ಸಾಕ್ಷಿಗಳಿಂದ ಹೇಳಿಸಿಕೊಂಡಿರುವುದಿಲ್ಲ.

9. ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದ ಫಿರ್ಯಾದಿಯ ಸಾಕ್ಷ್ಯ ಹಾಗೂ ಉಳಿದ ಸಾಕ್ಷಿದಾರರ ಸಾಕ್ಷ್ಯಗಳನ್ನು ಗಮನಿಸಲಾಗಿ ಸದರಿಯವರು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ನುಡಿದಿದ್ದು ಕಂಡುಬರುತ್ತದೆ. ಸದರಿಯವರು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದು ಕಂಡು ಬರುತ್ತದೆ. ಸದರಿಯವರು ಆರೋಪಿಳೊಂದಿಗೆ ರಾಜಿ ಮಾಡಿಕೊಂಡ ಕಾರಣ ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ನುಡಿದಿರುವುದು ಕಂಡುಬರುತ್ತದೆ. ಕಾರಣ ಆರೋಪಿತರ ವಿರುದ್ಧ ನಂಬಲರ್ಹವಾದ ಸಾಕ್ಷಾಧಾರಗಳು ಕಂಡು ಬರದ ಕಾರಣ ಅಭಿಯೋಜನೆಯವರು ಆರೋಪಿತರ ವಿರುದ್ಧ ತಮ್ಮ ಪ್ರಕರಣವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆಂದು ಅಭಿಪ್ರಾಯಪಟ್ಟು ಮೇಲ್ಕಂಡ ಪ್ರಶ್ನೆಗಳನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

10. **ಪ್ರಶ್ನೆ:6:–** ಮೇಲ್ಕಂಡ ಪ್ರಶ್ನೆಗಳನ್ನು ಅಭಿಯೋಜನೆಯ ವಿರುದ್ಧವಾಗಿ ನೀಡಿರುವುದರಿಂದ ಸದರಿ ಸಂಶಯದ ಲಾಭವನ್ನು ಅಪಾದಿತರಿಗೆ ನೀಡಿ ಈ ಕೆಳಕಂಡ ಆದೇಶ ಹೊರಡಿಸಿರುತ್ತೇನೆ.

## ಆದೇಶ

ದಂಡ ಪ್ರಕ್ರಿಯ ಸಂಹಿತೆ ಕಲಂ 248(1)ರ ಕೆಳಗೆ ಪ್ರದತ್ತವಾದ ಅಧಿಕಾರ ಚಲಾಯಿಸಿ 1 ರಿಂದ 3ನೇ ಆರೋಪಿಗಳನ್ನು ಭಾ.ದಂ.ಸಂ.ಯ ಕಲಂ 341, 323, 324, 354, 504, 109, 506 ಸಹಿತ 34ರ ಐಪಿಸಿ ಆರೋಪಗಳಿಗೆ ನಿರ್ದೋಷಿಗಳೆಂದು ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳು ರದ್ದುಗೊಂಡಿರುತ್ತವೆ.

ಆರೋಪಿಗಳು ಮತ್ತು ಅವರ ಜಾಮೀನುದಾರರ ಕಲಂ 437(ಎ) ಅಡಿಯಲ್ಲಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳು 6 ತಿಂಗಳುಗಳ ನಂತರ ರದ್ದುಗೊಳ್ಳುತ್ತವೆ.

(ಶೀಘ್ರಲಿಪಿಗಾರರಿಗೆ ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನ ಕೊಟ್ಟು ನಂತರ ಪರಿಷ್ಕರಿಸಿ ತಿದ್ದುಪಡಿ ಮಾಡಿ ದಿನಾಂಕ 20–11–2019 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

(ಸಂದೀಪ ಪಾಟೀಲ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಲಿಂಗಸೂಗೂರು.

**–:ಅನುಬಂಧಃ–**

1) ಅಭಿಯೋಜನೆ ಪರ ಪರೀಕ್ಷಿಸಲ್ಪಟ್ಟ ಸಾಕ್ಷಿಗಳುಃ

| | | |
|---|---|---|
| ಪ್ರಾ.ಸಾ–1 | : | ಭಾಗ್ಯಶ್ರೀ ತಂದೆ ದುರುಗಪ್ಪ |
| ಪ್ರಾಸಾ–2 | : | ರೇಣುಕಾ ಗಂಡ ದುರುಗಪ್ಪ |

2) ಆರೋಪಿತರ ಪರ ಪರೀಕ್ಷಿಸಲ್ಪಟ್ಟ ಸಾಕ್ಷಿಗಳುಃ

--- ಇಲ್ಲಾ ----

3) ಅಭಿಯೋಜನೆ ಪರ ಗುರ್ತಿಸಲ್ಪಟ್ಟ ದಾಖಲೆಗಳುಃ

| | | |
|---|---|---|
| ನಿ.ಪಿ.1 | : | ದೂರು. |
| ನಿ.ಪಿ.1(ಎ) | : | ಪ್ರಾ.ಸಾ–1ರವರ ಸಹಿ. |
| ನಿ.ಪಿ.2 | : | ಪಂಚನಾಮೆ. |
| ನಿ.ಪಿ.2(ಎ) | : | ಪ್ರಾ.ಸಾ–1ರವರ ಸಹಿ. |
| ನಿ.ಪಿ.3 | : | ಪ್ರಾ.ಸಾ–2ರವರ ಹೇಳಿಕೆ. |

4) ಆರೋಪಿತರ ಪರ ಗುರ್ತಿಸಲ್ಪಟ್ಟ ದಾಖಲೆಗಳುಃ

----ಇಲ್ಲಾ ----

5) ಮುದ್ದೆಮಾಲಿನ ಪಟ್ಟಿಃ

---- ಇಲ್ಲಾ ----

(ಸಂದೀಪ ಪಾಟೀಲ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಲಿಂಗಸೂಗೂರು.